ಮಲ್ಲಿಕಾರ್ಜುನ, ಸುರಧೇನುಪುರ
ಕಾಸಿದ್ರೆ ಕೈಲಾಸ. ಕೂಸಿದ್ರೆ?



ಎಲ್‌ಕೆಜಿಯಿಂದಲೇ ಕೈಸಾಲ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ
ಹಣೆಯಲ್ಲಿ ಅವರ ಹಸ್ತಾಕ್ಷರದ ಹಚ್ಚೆ ಹಾಕಿಸಿಕೊಳ್ಳಲು ಗಟಾರದಂತೆ ಕೊಳೆತು ನಾರುವ ಸೀರಿಯಲ್‌ನ ಡೈರೆಕ್ಟರ್ ಅಡ್ರೆಸ್ ಸಿಗತ್ತಾ?
ಆತನ ಹಸ್ತಾಕ್ಷರದ ಹಚ್ಚೆಯಿಂದ ಹಣೆಯಲ್ಲಿ ಇನ್ಫೆಕ್ಷನ್ ಆಗಿ ಹಣೆಬರಹ ಕೆಡುವುದಂತೆ; ಎಚ್ಚರ.

ಜಗದೀಶ ಬಿ. ಹೊಸೂರು, ಮೈಸೂರು
ನಮ್ಮ ದೇಶದಲ್ಲಿ ಸ್ವಕುಟುಂಬ ಪ್ರೀತಿಸದ ಜನನಾಯಕರು ಶೇಕಡಾವಾರು ಎಷ್ಟಿರಬಹುದು?
ಬೆರಳೆಣಿಕೆಯಷ್ಟು. ಎಲ್ಲ ನಾಯಕರಿಗೂ ತಮ್ಮ ಮೊಮ್ಮೊಮ್ಮೊಮ್ಮೊಮ್ಮೊಮ್ಮಗ/ಳು ಪ್ರಧಾನಿಯಾಗಬೇಕೆಂಬ ಹಂಬಲ.

ಪಿ. ಜಯವಂತ ಪೈ, ಕುಂದಾಪುರ
ವಿಶ್ವ ಯೋಗ ದಿನ ಆಚರಿಸಿದಂತೆ ವಿಶ್ವ ಕುಡುಕರ ದಿನ ಆಚರಿಸಿದರೆ ಹೇಗೆ?



ವಿಶ್ವ ಕುಡುಕರ ಯೋಗ ದಿನ ಎಂದು ಆಚರಿಸಿ; ಎಲ್ಲರಿಂದಲೂ ಶವಾಸನ ಹಾಕಿಸಬಹುದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಸುಂದರವಾದದ್ದು ಒಳ್ಳೆಯದಾಗಿರುವುದಿಲ್ಲ. ಏಕೆ ಸರ್?
ಈ ಪ್ರಶ್ನೆಯನ್ನು ನಿಮ್ಮ ಮಡದಿ ಓದುವುದಿಲ್ಲ ತಾನೆ?

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕ
ಇಂದು ಸತ್ಯಹರಿಶ್ಚಂದ್ರ ಬದುಕಿದ್ದರೆ ಹೇಗೆ ಸತ್ಯ ಪಾಲಿಸುತ್ತಿದ್ದ?
ಚಿಕ್ಕ ಮಕ್ಕಳಿಗೆ ಲೆಕ್ಕ ಹೇಳಿಕೊಡುವ ಮೇಷ್ಟ್ರಾಗಿ. ಲೆಕ್ಕದಲ್ಲಿ ಸುಳ್ಳಿಲ್ಲವಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಕಳ್ಳ, ಸುಳ್ಳ, ಮೋಸಗಾರ ಶ್ರೀಮಂತನಾಗಿರುತ್ತಾನೆ. ಸತ್ಯ ನುಡಿಯುವವ ಶ್ರೀಮಂತನಾಗಿರುವುದಿಲ್ಲ. ಏಕೆ?
ಸತ್ಯದೊಂದಿಗೆ ವಿವೇಚನೆ ಇಲ್ಲದಿರುವುದರಿಂದ. ಶುದ್ಧ ಸತ್ಯವಂತನಿಗೆ ಕರ್ಣನ ಗತಿಯೇ ಗಟ್ಟಿ.

ಮಂಡಿ ಕುಮಾರ್, ಬೆಂಗಳೂರು
ಸಣ್ಣ ದೋಣಿಯ ಅಂಬಿಗ ತಾನೇ ಎರಡೂ ಹುಟ್ಟನ್ನು ಚಲಾಯಿಸುತ್ತಾನೆ. ಸಂಸಾರವೆಂಬ ದೋಣಿಗೆ ಇಬ್ಬರೇಕೆ?
ಸಂಸಾರನೌಕೆ ಸುಳಿಗಳ ಮೂಲಕ ಸಾಗುವುದಲ್ಲ! ಸುಳಿಯಿದ್ದೆಡೆ ಪರಿಶ್ರಮ ಹೆಚ್ಚು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಗರ್ಭದಲ್ಲಿರುವ ಜೀವಕ್ಕೂ, ಗರ್ಭಗುಡಿಯಲ್ಲಿರುವ ಶಿಲೆಗೂ ಏನು ವ್ಯತ್ಯಾಸ?
ಇದಕ್ಕೆ ಹುಟ್ಟಿನ ನಂತರ ಜೀವನದ ಪೆಟ್ಟು; ಅದಕ್ಕೆ ಪೆಟ್ಟಿನಿಂದಲೇ ಹುಟ್ಟು.

ಅಶೋಕ ಗೊರವರ, ಧಾರವಾಡ
ಹುಚ್ಚು ವಾಸಿಯಾಗಿದ್ದರೂ ಕೆಲವರನ್ನು ಹುಚ್ಚರಂತೆ ನಡೆಸಿಕೊಳ್ಳುವುದೇಕೆ?
ಅವರನ್ನು ಹುಚ್ಚರಂತೆ ಕಾಣುವ ಹುಚ್ಚು ಇವರಿಗೆ ಬಿಟ್ಟಿರುವುದಿಲ್ಲವಂತೆ.

ಧನ್ಯತ ಎಂ.ಸಿ. ಬೆಂಗಳೂರು
ಗುರುದಕ್ಷಿಣೆಗೂ ವರದಕ್ಷಿಣೆಗೂ ಏನು ವ್ಯತ್ಯಾಸ?
ಇದು ಯೋಗ್ಯರಿಗಿತ್ತ ಗೌರವ; ಅದು ಅಯೋಗ್ಯನಿಗಿತ್ತ ಭಿಕ್ಷೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಗುರುಶಿಷ್ಯರ ಸಂಬಂಧ ಹೇಗಿರಬೇಕು ಸರ್?
ಚಾರ್ಜರ್–ಮೊಬೈಲ್ ಇದ್ದಂತೆ. ಶಿಷ್ಯನ ಬ್ಯಾಟರಿ ಖಾಲಿ ಆದಾಗ ರೀಚಾರ್ಜ್ ಮಾಡುವವನೇ ಗುರು.

ಬಿ. ಚಂದ್ರೇಗೌಡ, ಬೆಂಗಳೂರು
ಆದರ್ಶ ಗೃಹಸ್ಥನಾಗುವುದು, ಆದರ್ಶ ಸನ್ಯಾಸಿಯಾಗುವುದಕ್ಕಿಂತ ಕಷ್ಟವಂತೆ. ಹೌದೆ?
ನಿಜ. ಸನ್ಯಾಸಿ ಪ್ರತಿದಿನ ಪ್ರತಿಕ್ಷಣ ಹೆಣ್ಣಾವಲಿನ ಸಿಸಿಟೀವಿಯಡಿ ಬದುಕಬೇಕಿಲ್ಲವಲ್ಲ.

## ವಾರದ ಪ್ರಶ್ನೆ

ಜೆ. ಪ್ರದೀಪ್ ಕುಮಾರ್, ಹೂವಿನಹಡಗಲಿ
ನಾನು ಹೊಸ ಮೊಬೈಲ್ ಕೊಂಡ ತಕ್ಷಣವೇ ನೂತನ ಆಕರ್ಷಕ ಮಾಡೆಲ್‌ಗಳು ಬರುತ್ತವೆಯಲ್ಲ, ಏನು ಮಾಡಬೇಕು?
ಪ್ರತಿ ಹೊಸ ಮಾಡೆಲ್ಲೂ ನಿಮ್ಮನ್ನು ಕೈ ದಾಟಿಯೇ ಸಾಗಬೇಕಾದಂತಹ ಮೊಬೈಲ್ ಅಂಗಡಿಯ ಸೇಲ್ಸ್‌ಮನ್ ಆಗಿಬಿಡಿ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ದುಡಿದೂ ಅಗತ್ಯಗಳು ಪೂರೈಕೆ ಆಗದಿದ್ದಾಗ ಏನು ಮಾಡಬೇಕು?
ಅಗತ್ಯಗಳ ವ್ಯಾಖ್ಯಾನವನ್ನೇ ಬದಲಿಸಬೇಕು.

ಅನಸೂಯ ಟಿ., ಕೇದಿಗೆಮನೆ
ಇಹದಲ್ಲಿ ಸುಖ ಜಾಸ್ತಿಯೋ ಪರದಲ್ಲೋ?
ಪರದಲ್ಲಿಯೇ; ಅಲ್ಲಿ ಕುಕವಿಗೋಷ್ಠಿ, ಪಠ್ಯಪುಸ್ತಕ ರಗಳೆ, ಜಿಎಸ್‌ಟಿ ಇತ್ಯಾದಿ ಇರಲ್ವಲ್ಲ!

ಎಸ್ಸೆನ್ ಮಹಾಬಲರಾವ್, ಎನ್ನಾರ್‍ಪುರ
ಕುದುರೆಯ ಸಾಮರ್ಥ್ಯವನ್ನು ತಿಳಿದೇ ಹತ್ತಿ ಕೂರುವುದೇಕೆ?



ಸಾಮರ್ಥ್ಯ ತಿಳಿಯದೆ ಕುಳಿತರೆ ಸವಾರಿ ಕುದುರುವುದಿಲ್ಲವಂತೆ.

ಮಹಾವೀರ ಕಾಸರ, ಶಿವಮೊಗ್ಗ
ಬೆಳಗಾವಿ ಸುವರ್ಣಸೌಧದಲ್ಲಿ ಅಧಿವೇಶನ ನಡೆಸುವುದರಿಂದ ಲಾಭ ಯಾರಿಗೆ?
'ನಮಗೆ' ಎಂದರು ಅಲ್ಲಿನ ಬಾರ್ & ರೆಸ್ಟೋರೆಂಟ್ ಮಂದಿ.

ಬಾ.ರಂ. ಸುರೇಶ್, ಶಿವಮೊಗ್ಗ
ರಸ್ತೆಯಲ್ಲಿ ಹೋಗುತ್ತಿರುವಾಗ ಕೆಲವು ಹುಡುಗಿಯರು ನನ್ನನ್ನು ತಿರುಗಿ ತಿರುಗಿ ನೋಡುವರಲ್ಲ, ಏಕಿರಬಹುದು?
ಮೃಗಾಲಯದ 'ಕಾಣೆಯಾಗಿದೆ' ಜಾಹೀರಾತು ಅವರಿಗೆ ನೆನಪಾಯಿತು ಎನಿಸುತ್ತದೆ.

■ ರಾಮ್